ದಿನಾಂಕಃ 24-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದ**

ನಮ್ಮ ಆಸ್ತಿಯ ಸರ್ವೆ ನಂ 103 ಮತ್ತು 104ರಲ್ಲಿದೆ. ಸದರಿ ಸರ್ವೆ ನಂಬರುಗಳನ್ನು ತೋರಿಸಲು ಗ್ರಾಮ ನಕ್ಷೆಯಲ್ಲಿ ಸದರಿ ಸರ್ವೆ ನಂಬರುಗಳನ್ನು ಉಲ್ಲೇಖಿಸಲಾಗಿದೆ ಎಂದರೆ ಸರಿ. ನಾನು ಲಕ್ಷ್ಮಿಸಾಗರದ ಗ್ರಾಮದ ಗ್ರಾಮ ನಕ್ಷೆಯನ್ನು ನೋಡಿರುತ್ತೇನೆ. ನಿಪಿ-6 ಸದರಿ ಗ್ರಾಮ ನಕ್ಷೆ ಎಂದರೆ ಸರಿ. ಅದರಲ್ಲಿ ನಮ್ಮ ಸರ್ವೆ ನಂ 103 ಮತ್ತು 104 ಉಲ್ಲೇಖವಿದೆ ಎಂದರೆ ಸರಿ. ಸದರಿ ಸರ್ವೆ ನಂ 103 ಮತ್ತು 104 ರ ಉತ್ತರ ಭಾಗಕ್ಕೆ ಸರ್ವೆ ನಂ 111 ಬರುತ್ತದೆ ಎಂದರೆ ಸರಿ. ಸರ್ವೆ ನಂ 103 ಮತ್ತು 104 ರ ದಕ್ಷಿಣ ಭಾಗಕ್ಕೆ ಸರ್ವೆ ನಂ 95 ಮತ್ತು 96 ಬರುತ್ತದೆ ಎಂದರೆ ಸರಿ. ಸರ್ವೆ ನಂ 97ರ ಅಸ್ತಿ ಸರ್ವೆ ನಂ 103 ಮತ್ತು 104ಕ್ಕೆ ಯಾವ ದಿಕ್ಕಿನಿಂದಲೂ ಲಗತ್ತಾಗಿಲ್ಲ ಎಂದರೆ ಸರಿ. ಸರ್ವೆ ನಂ 97ರ ಉತ್ತರ ಭಾಗಕ್ಕೆ ಸರ್ವೇ ನಂ 105 ಮತ್ತು 106ರ ಆಸ್ತಿ ಬರುತ್ತದೆ ಎಂದರೆ ಸರಿ. ಸರ್ವೆ ನಂ 97ರ ದಕ್ಷಿಣ ಭಾಗಕ್ಕೆ ಸರ್ಕಾರಿ ಸರ್ವೆ ನಂ 17ರ ಬಗರ್ ಹುಕ್ಕುಂ ಸಾಗುವಳಿ ಬರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ 97ರ ದಕ್ಷಿಣ ಭಾಗಕ್ಕೆ ವಾದಿಯ ಮಗನಾದ ಜಾವೂರ್ ರವರು ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಸರ್ವೆ ನಂ 105 ಮೊದಲು ಸಾಹೇಬೀ ಯವರ ಜಮೀನಾಗಿದ್ದು ನಂತರ ನನ್ನ ಅಣ್ಣನಾದ ಅಂಬಾಜಿರಾವ್ ರವರು ಖರೀದಿ ಮಾಡಿರುತ್ತಾರೆ. ಸರ್ವೆ ನಂ 106ರ ಆಸ್ತಿ ಮೊದಲು ಲಕ್ಷ್ಮಿದೇವಮ್ಮನವರ ಹೆಸರಿನಲ್ಲಿದ್ದು ಈಗ ಸುಬ್ರಹ್ಮಣ್ಯಪ್ಪ ಎನ್ನುವವರು ಖರೀದಿ ಮಾಡಿರುತ್ತಾರೆ. ಹಾಗಾಗಿ ಸರ್ವೆ ನಂ 97 ರ ಚೆಕ್ಕುಬಂದಿ ಪೂರ್ವಕ್ಕೆ ಸರ್ವೆ ನಂ 98 ರ ಜಮೀನು, ಪಶ್ಚಿಮಕ್ಕೆ ಸರ್ವೆ ನಂ 96ರ ಜಮೀನು, ಉತ್ತರಕ್ಕೆ ಸರ್ವೆ ನಂ 105 ಮತ್ತು 106ರ ಜಮೀನ, ದಕ್ಷಿಣಕ್ಕೆ ಸರ್ವೆ ನಂ 17ರ ಬಗರ್ ಹುಕ್ಕುಂ ಜಮೀನು ಎಂದರೆ ಸರಿ. ಸದರಿ ಪೂರ್ವ ಭಾಗದಲ್ಲಿರುವ ಸರ್ವೆ ನಂ 98ರ ಜಮೀನನ್ನು ವಾದಿಯ ಗಂಡನಾದ ಮಹಮ್ಮದ್ ಯೂಸೂಫ್ ರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಹಾಗಾಗಿ ಸರ್ವೆ ನಂ 97ರ ಚೆಕ್ಕುಬಂದಿಯೊಳಗೆ ವಾದಿ ಮತ್ತು ಆಕೆಯ ಗಂಡ ಸಾಗು ಮಾಡುತ್ತಿದ್ದರೆ ಎಂದರೆ ಸರಿ. ಹಾಗಾಗಿ ಸರ್ವೆ ನಂ 97ರ ಜಮೀನಿನ ಚೆಕ್ಕುಬಂದಿಯೊಳಗೆ ನನಗೆ ಸೇರಿದ ಜಮೀನು ಯಾವುದೂ ಇಲ್ಲ ಎಂದರೆ ಸರಿ.

ಈ ದಾವೆ ಹೂಡುವ ಸಮಯಕ್ಕೆ ವಾದಿ ಪ್ರಸ್ತುತ ಮೇಲೆ ಹೇಳಿದ ಚೆಕ್ಕುಬಂದಿಯನ್ನು ನಮೂದಿಸಿಯೇ ದಾವೆ ಹೂಡಿದ್ದಾರೆ ಎಂದರೆ ಸರಿ. ನಾನು ಈ ದಾವೆಗೆ ತಕರಾರು ಸಲ್ಲಿಸುವ ಸಮಯಕ್ಕೆ ಸದರಿ ದಾವಾಸ್ತಿಯ ಚೆಕ್ಕುಬಂದಿಗಳು ನಮ್ಮ ಜಮೀನಿಗೆ ಸಂಬಂಧಿಸಿದ

ಚೆಕ್ಕುಬಂದಿಗಳು ಎಂದು ನಾನು ಹೇಳಿರುವುದಿಲ್ಲ ಎಂದರೆ ಸರಿ. ಸದರಿ ಸರ್ವೆ ನಂ 97ರಲ್ಲಿ ವಾದಿ ಮತ್ತು ಆಕೆಯ ಗಂಡ ಸುಮಾರು 7-8 ವರ್ಷಗಳಿಂದ ಸಾಗು ಮಾಡುತ್ತಿದ್ದಾರೆ. ಹಾಗಾಗಿ 2017ರಲ್ಲಿ ವಾದಿ ಸದರಿ ಸರ್ವೆ ನಂಬರಿನಲ್ಲಿ ಸಾಗು ಮಾಡುತ್ತಿದ್ದರು ಎಂದರೆ ಸರಿ. ಸದರಿ ದಾವಾಸ್ತಿ ಜಮೀನು ಮತ್ತು ನಮ್ಮ ಜಮೀನುಗಳು ಖುಷ್ಕಿ ಜಮೀನುಗಳು ಎಂದರೆ ಸರಿ. ಸದರಿ ಜಮೀನುಗಳು ಮಳೆಯಾಧಾರಿತವಾಗಿದ್ದು ಮೆಕ್ಕೆಜೋಳವನ್ನು ಬೆಳೆಯುತ್ತಾರೆ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಮೆಕ್ಕೆಜೋಳವನ್ನು ಪ್ರತಿವರ್ಷ ಜೂನ್ ಮಾಹೆಯಲ್ಲಿ ಬಿತ್ತನೆ ಮಾಡಲಾಗುತ್ತದೆ ಎಂದರೆ ಸರಿ. ಹಾಗಾಗಿ ವಾದಿಗಳು 2016ರ ಜೂನ್ ತಿಂಗಳ ಕೊನೆಯ ವಾರದಲ್ಲಿ ಮೆಕ್ಕೆಜೋಳವನ್ನು ಬಿತ್ತನೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ಸಮಯಕ್ಕೆ ನಾನು ವಾದಿಗಳು ಮಾಡುತ್ತಿದ್ದ ಬಿತ್ತನೆ ಕಾರ್ಯಕ್ಕೆ ಅಡ್ಡಿಪಡಿಸಿದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಾಗಲಿ ಅಥವಾ ನನ್ನ ತಕರಾರಿನಲ್ಲಾಗಲಿ ವಾದಿಗಳು ನಮ್ಮ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿ. ಹಾಗಾಗಿ ವಾದಿಗಳು ದಾವಾಸ್ತಿಯ ಚೆಕ್ಕುಬಂದಿಗೆ ನಾನು ಅಡೆತಡೆ ಉಂಟು ಮಾಡಿದಕಾರಣ ವಾದಿಗಳು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಸಮಯಕ್ಕೆ ವಾದಿ ಪರ ವಕೀಲರು ಪ್ರತಿವಾದಿ ಪರ ವಕೀಲರು ಚೆಕ್ಕುಬಂದಿಗಳನ್ನು ಹೇಳಿ ನಂತರ ಪ್ರಶ್ನೆ ಕೇಳುವಂತೆ ಮನವಿ ಮಾಡಿದ್ದು ಸದರಿ ಚೆಕ್ಕುಬಂದಿಗಳನ್ನು ಈಗಾಗಲೇ ಪಾಟೀ ಸವಾಲಿನಲ್ಲಿ ನಮೂದಿಸಿದಕಾರಣ ಸದರಿಯವರ ಮನವಿಯನ್ನು ತಳ್ಳಿಹಾಕಲಾಯಿತು.

ಹಾಗಾಗಿ ವಾದಿಗಳು ಕೇಳಿರುವ ಚೆಕ್ಕುಬಂದಿಯೊಳಗಿನ ದಾವಾಸ್ತಿಗೆ ಶಾಶ್ವತ ನಿರ್ಬಂದಾಕಾಜ್ಞೆಯ ಆದೇಶವನ್ನು ಹೊರಡಿಸಿದರೆ ನಮಗೇನು ಲುಕ್ಸಾನು ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಚೆಕ್ಕುಬಂದಿ ಆಸ್ತಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.